22.11.2019

ಸಾಕ್ಷಿ ಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ  ಜಿ ಜಿ ವಕೀಲರಿಂದಃ

ಈ ದಾವೆಯ ವಾದಿ ಪರಿಚಯ ಇದೆ.  ಈ ದಾವೆಯು ಮಸೀದಿಗೆ ಸಂಬಂದಪಟ್ಟಂತೆ ಡಿಮ್ಯಾಂಡ್ ರಿಜಿಸ್ಟರ್ ಗೆ ಹೂಡಿರುತ್ತಾರೆ.  ವಾದಿ ಈ ದಾವೆಯಲ್ಲಿ ಏನು ಚಕ್ಕುಬಂದಿ ತೋರಿಸಿರುತ್ತಾರೆ ಎಂದು ಗೊತ್ತು ಪೂಃ ಸರ್ವೆ ಸಂಖ್ಯೆಃ 15 ರ ಜಮೀನು ಪಃ ಪುಂಡರೀಕಾಕ್ಷ ರವರ ಜಮೀನು ಉಃ ಸರ್ವೆ ಸಂಖ್ಯೆಃ 15 ರ ಉಳಿಕೆ ಜಮೀನು ದಃ ರಸ್ತೆ ಎಂದು ತೋರಿಸಿರುತ್ತಾರೆ.  ದಾವ ಸರ್ವೆ ಸಂಖ್ಯೆಃ 15 ರಲ್ಲಿರುವ ಜಮೀನು ವಾದಿಗೆ ಸೇರಬೇಕು ಎಂದರೆ ಸಾಕ್ಷಿಯು ವಾದಿ ಮತ್ತು ಅವರ ಸಹೋದರರಿಗೆ ಜಂಟಿಯಾಗಿ ಸೇರ ಬೇಕೆಂದು ಎಂದು ನುಡಿಯುತ್ತಾರೆ.  ಆ ಪ್ರಕಾರ ನಾನು ಯಾವುದೇ ದಾಖಲೆ ನೋಡಿಲ್ಲ. ಸರ್ವೆ ಸಂಖ್ಯೆಃ 15, 16, 17 ಜಮೀನುಗಳು ವಾದಿಗೆ ಅವರ ತಂದೆ - ಮುತ್ತಾತನಿಂದ ಬಂದಿರುತ್ತದೆ ಎಂದರೆ ಸರಿಯಲ್ಲ.  ದಾವ ಸ್ವತ್ತು ವಾದಿಯ ತಂದೆಯ ಮೂಲಕ ವಾದಿಗೆ ಬಂದಿರುತ್ತದೆ .  ವಾದಿ ಮತ್ತು ಅವರ ಸಹೋದರರ ನಡುವೆ ಆದ ವಿಭಾಗದ ದಾವೆಯಲ್ಲಿ ದಾವ ಸ್ವತ್ತು ವಾದಿ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ.  ಈ ದಾವೆ ನಡೆಯುತ್ತಿರುವ ಸ್ವತ್ತು ಎಂದರೆ ಮಸೀದಿಯು ಗ್ರಾಮಠಾಣಾ ಪ್ರದೇಶದಲ್ಲಿ ಬರುತ್ತದೆ.  ದಾವ ಸ್ವತ್ತು ಇರುವ ಜಮೀನಿಗೂ  ಮತ್ತು ಮಸೀದಿ ಇರುವ ಜಮೀನಿಗೂ  ಯಾವುದೇ ಸಂಬಂದವಿರುವುದಿಲ್ಲ.  ನಾನು ಹೇಳುವ ಮಸೀದಿಯ ಸ್ವತ್ತು ಅಜೀಜ್ ಸಾಬ್ ರವರಿಗೆ ಸೇರಿತ್ತು.  ಅವರು ನನಗೆ ಸಂಬಂಧಿಕರಲ್ಲ ಆದರೆ ನಮ್ಮ ಧರ್ಮದವರು. ಅಜೀಜ್ ಸಾಬ್ ರವರಿಗೆ ಸದರಿ ಸ್ವತ್ತು ಹರಾಜಿನ ಮೂಲಕ ಬಂದಿರುತ್ತದೆ.  ಆ ರೀತಿ ಹರಾಜಿನ ಮೂಲಕ ಬಂದಿರುತ್ತದೆ ಎಂದು ತೋರಿಸಲು ಹರಾಜು ಸರ್ಟಿಫಿಕೇಟ್ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.  ಸದರಿ ಹರಾಜು ಸರ್ಟೀಪಿಕೇಟ್ ನ್ನು ಯಾರು ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ.

ಹರಾಜು ಸರ್ಟೀಫಿಕೇಟು ನ್ಯಾಯಾಲಯ ಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.  ಗ್ರಾಮಠಾಣಾ ಜಾಗ ಎಂದೇ ಹರಾಜು ಆಗಿರುತ್ತದೆ.  ಹರಾಜು ಆಗಿದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ ಮತ್ತು ಯಾವ ದಾಖಲೆಯನ್ನ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.  ಪೂಪಃ 76 ಅಡಿ ಉದಃ 96 ಅಡಿ ಜಾಗವು ಹರಾಜಿನ ಮೂಲಕ ಅಜೀಜ್ ಸಾಬ್ ಖರೀದಿಸಿರುತ್ತಾರೆ.  ದಿಲ್ಶಾದ್ ಬೇಗಂ ರವರು ಅಂದರೆ 4 ನೇ ಪ್ರತಿವಾದಿಯು ಪೂಪಃ 13 ಅಡಿ ಉದಃ 96 ಅಡಿ ಜಾಗವನ್ನು ಮಸೀದಿಗೆ ದಾನಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ.  ಉಳಿಕೆ ಜಮೀನಾದ ಪೂಪಃ 63 ಅಡಿ ಉದಃ 96 ಅಡಿಯ ಚಕ್ಕುಬಂದಿ ಗೊತ್ತು, ಪೂಃ ಮಸೀದಿ  ಜಾಗ, ಪಃ  ಸಲಾವುದ್ದೀನ್ ರವರ ಜಾಗ ಉಃ ಸರ್ವೆ ಸಂಖ್ಯೆಃ 15 ರ ಜಮೀದಿನು ದಃ ರಸ್ತೆ ಇರುತ್ತದೆ.  ಮಸೀದಿಯ ಚಕ್ಕುಬಂದಿ ಗೊತ್ತು ಪೂಃ ಸರ್ವೆ ಸಂಖ್ಯೆಃ 15 ಜಮೀನು ಪಃ 4 ನೇ ಪ್ರತಿವಾದಿ ಜಾಗ ಉಃ ಸರ್ವೆ ಸಂಖ್ಯೆಃ 15 ರ ಜಮೀನು ದಃ ರಸ್ತೆ ಇರುತ್ತದೆ.  ಮಸೀದಿಯ ಜಾಗದ ಅಸೆಸ್‌ಮೆಂಟ್ ರಿಜಿಸ್ಟರ್ ಮತ್ತು ಡಿಮ್ಯಾಂಡ್ ರಿಜಿಸ್ಟರ್  ಸಂಃ ನನಗೆ ಗೊತ್ತಿಲ್ಲ.  ಅಜೀಜ್ ಸಾಬ್ ರವರ ಹೆಸರಿನಲ್ಲಿರುವ ಪಂಚಾಯ್ತಿ ದಾಖಲೆಗಳನ್ನ ನ್ಯಾಯಾಲಯ ಕ್ಕೆ ಕೊಟ್ಟಿಲ್ಲ.  ಸಾಕ್ಷಿ ಮುಂದುವರೆದು ಅವರ ಹೆಂಡತಿಯಾದ 5 ನೇ ಪ್ರತಿವಾದಿ ಹೆಸರಿನಲ್ಲಿರುವ ದಾಖಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.  ಅಜೀಜ್ ಸಾಬ್ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.  ಅಜೀಜ್ ಸಾಬ್ ರವರು ಅವರಿಗೆ ಸೇರಿದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನೊಂದಣಿ ದಾಖಲೆ ಮೂಲಕ 5 ನೇ ಪ್ರತಿವಾದಿಗೆ ಸ್ವತ್ತು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.  5 ನೇ ಪ್ರತಿವಾದಿಗೆ ಯಾವ ರೀತಿ ಸ್ವತ್ತು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.  5 ನೇ ಪ್ರತಿವಾದಿಗೆ ಯಾವ ಆಧಾರದ ಮೇರೆಗೆ ಸ್ವತ್ತು ವರ್ಗಾವಣೆ ಆಗಿದೆ ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

ಅಜೀಜ್ ಸಾಬ್ ರವರಿಗೆ 5 ನೆ ಪ್ರತಿವಾದಿಯು ಸೊಸೆ ಅಗಬೇಕು. ಆ ರೀತಿ ಸಂಬಂದ ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ಅಜೀಜ್ ಸಾಬ್ ಮೃತಪಟ್ಟ ನಂತರ ಅವರಿಗೆ ಸೇರಿದ ಸ್ವತ್ತು ಯಾರ ಪಾಲಿಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಚೀದ್ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಮಸೀದಿಗೆ ಸೇರಿದ ಸ್ವತ್ತು ನಚೀದ್ ರವರ ಪಿತ್ರಾರ್ಜಿತ ಸ್ವತ್ತು ಎಂದು ಹೇಳಿ ಬರೆಸಿಲ್ಲ. ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರಿಕೆ ಯಲ್ಲಿ ವಿವರಿಸಿರುವ ದಾವೆಗಳು ಈಗ ವಜಾ ಅಗಿರುತ್ತವೆ ಎಂದರೆ ಸಾಕ್ಷಿಯು ಹುಣಸೂರು ನ್ಯಾಯಾಲಯ ದ ಮುಂದೆ ಚಾಲ್ತಿಯಲ್ಲಿವೆ ಎಂದು ನುಡಿಯುತ್ತಾರೆ. ಆ ರೀತಿ ಚಾಲ್ತಿಯಲ್ಲಿರುತ್ತವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಹುಣಸೂರು ನ್ಯಾಯಾಲಯ ದ ಮುಂದಿರುವ ದಾವೆಯಲ್ಲಿ ಯಾರು ಪಕ್ಷಕಾರರು ಎಂದು ಗೊತ್ತು. ವಾದಿ ಆ ದಾವೆಯಲ್ಲಿ ಪಕ್ಷಕಾರರಲ್ಲ ಎಂದರೆ ಸರಿ. ನಾನು ಹೇಳಿದ ಹಾಗೆ ಹುಣಸೂರು ಅಥವಾ ಉಚ್ಚ ನ್ಯಾಯಾಲಯ ದಲ್ಲಿಯಾಗಲೀ ಯಾವುದೇ ಪ್ರಕರಣ ಚಾಲ್ತಿಯಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಮಸೀದಿ ಕಟ್ಟಲು ಯಾವುದೇ ಪರವಾನಿಗಿ ಪಡೆದಿಲ್ಲ. ಆದರೆ ಆವರಣ ಗೋಡೆ ಕಟ್ಟಲು ಪರವಾನಿಗಿ ಪಡೆದಿರುತ್ತೇವೆ. ಯಾವ ಸಾಲಿನಲ್ಲಿ ಆ ರೀತಿ ಪರವಾನಿಗಿ ಪಡೆದಿರುತ್ತೇವೆ ಎಂದು ನೆನಪಿಲ್ಲ. ಪ್ರತಿವಾದಿಗಳು ಹಾಜರುಪಡಿಸಿರುವ ನಿಡಿ 6 ಪ್ರಕಾರ 2002 ರಲ್ಲಿ ಆ ರೀತಿ ಪರವಾನಿಗಿ ಪಡೆದಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಪರವಾನಿಗಿ ಪ್ರಕಾರ ಆವರಣ ಗೋಡೆ ಹಾಕಿಲ್ಲ ಎಂದರೆ ಸಾಕ್ಷಿಯು ಗೋಡೆ ಹಾಕಿರುವುದಿಲ್ಲ ಆದರೆ ತಂತಿಬೇಲಿ ಅಳವಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರಿಕೆ ಯಲ್ಲಿ ತಂತಿಬೇಲೆ ಅಳವಡಿಸಿರುವ ಬಗ್ಗೆ ಉಲ್ಲೇಖಿಸಿರುತ್ತೇನೆ. 2006 ರಲ್ಲಿ ಆ ರೀತಿ ತಂತಿಬೇಲಿ ಅಳವಡಿಸಿರುತ್ತೇವೆ. ನಾನು ಹೇಳಿದ ಹಾಗೆ ಯಾವುದೇ ತಂತಿಬೇಲಿ ಅಳವಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ವಾದಿಯು ಹೂಡಿರುವ ದಾವ ಸ್ವತ್ತಿನ ಉಃ ದಿಕ್ಕಿನಲ್ಲಿ ವಾದಿ ಮನೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 44 (ಎ) ತೋರಿಸಿ ಅದರಲ್ಲಿ ಕಂಡು ಬರುವ ಊರು ಅದರ ಉಃ ದಿಕ್ಕಿನಲ್ಲಿ ಮಡಿಕೇರಿ - ಮೈಸೂರು ರಸ್ತೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪುನಃ ನಿಪಿ 44 (ಎ) ತೋರಿಸಿ ಸರ್ವೆ ಸಂಖ್ಯೆ 14 ಅದರ ದಕ್ಷಿಣ ಕ್ಕೆ ಅದರ ದಕ್ಷಿಣಕ್ಕೆ ಗ್ರಾಮಠಾಣಾ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಸೀದಿಯು ಸರ್ವೆ ಸಂಖ್ಯೆ 13 ರಲ್ಲಿ ಬರುವುದಿಲ್ಲ ಎಂದರೆ ಸಾಕ್ಷಿಯು ಗ್ರಾಮಠಾಣಾ ಪ್ರದೇಶದಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಮಡಿಕೇರಿ - ಮೈಸೂರು ರಸ್ತೆಯ ಉಃ ದಿಕ್ಕಿಗೆ ವಾದಿ ಸೇರಿದ ಸರ್ವೆ ಸಂಖ್ಯೆ 15 ಮತ್ತು 16 ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ರಸ್ತೆಯ ದಕ್ಷಿಣ ದಿಕ್ಕಿನಲ್ಲಿ ದಾವ ಸ್ವತ್ತು ಬರುತ್ತದೆ ಎಂದರೆ ಸಾಕ್ಷಿಯು ನಕ್ಷೆ ಆದಾರದ ಮೇರೆಗೆ ನನಗೆ ಹೇಳಲಾಗುವುದಿಲ್ಲ. ಇದೇ ಮಸೀದಿ ಸ್ವತ್ತು ಎಂದು ಸಂಬಂದಪಟ್ಟ ಅದಿಕಾರಿಗಳು ತೋರಿಸಿಕೊಟಿಟರುತ್ತಾರಾ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿ ಇದೇ ಸ್ವತ್ತು ಎಂದು ತೋರಿಸಿಕೊಟ್ಟಿರುತ್ತಾರೆ, ಆ ಪ್ರಕಾರ ನಾವು ಕಾಡು ಕಡಿದಿರುತ್ತೇವೆ ಎಂದು ನುಡಿಯುತ್ತಾರೆ. ಆ ಪ್ರಕಾರ ನಕಾಶೆ ತಯಾರಿಸಿರುತ್ತಾರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ವಕ್ಫ ಸಂಸ್ತೆಯಲ್ಲಿ ನೋಂದಣಿ ಮಾಡಿಕೊಂಡಿರುವುದಿಲ್ಲ. 2014 ರಲ್ಲಿ 2 ನೇ ಪ್ರತಿವಾದಿ ಆ ರೀತಿ ಬೇಟಿ ನೀಡಿರುತ್ತಾರೆ. ಆದರೆ ಯಾವ ತಾಃತಿಂಃ ಎಂದು ನೆನಪಿಲ್ಲ. ಆದರೆ ಈ ದಾವೆ ಹೂಡುವ ಮೊದಲೇ ಬಂದಿರುತ್ತಾರೆ. 2 ನೇ ಪ್ರತಿವಾದಿ ಸ್ಥಳಕ್ಕೆ ಬೇಟಿ ನೀಡಿರುತ್ತಾರೆ ಮತ್ತು ಮಹಜರು ಮಾಡಿದರು ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ಹೇಳಿದ ಹಾಗೆ 2 ನೆ ಪ್ರತಿವಾದಿ ಸ್ಥಳಕ್ಕೆ ಬೇಟಿ ನೀಡಿಲ್ಲ ಮತ್ತು ಯಾವುದೇ ಜಾಗ ತೋರಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿ ಯ ಕೊಪ್ಪ ಗ್ರಾಮ ಪಂಚಾಯಿತಿ ಯ ಸದಸ್ಯನಾಗಿ ಕೆಲಸ ಮಾಡಿರುತ್ತೇನೆ. ಸ್ವತ್ತನ್ನು ಹರಾಜು ಮಾಡಲು ಗ್ರಾಮ ಪಂಚಾಯಿತಿ ರವರು ಸಂಬಂದಪಟ್ಟ ಅದಿಕಾರಿಗಳಿಂದ ಅನುಮತಿ ಪಡೆದಿರುತ್ತಾರೊ ಇಲ್ಲವೊ ಗೊತ್ತಿಲ್ಲ. ಸರ್ವೆ ಸಂಖ್ಯೆ 15 ಮತ್ತು ಗ್ರಾಮ ಠಾಣಾ ಪ್ರದೇಶ

ಎಷ್ಟು ಅಂತರದಲ್ಲಿರುತ್ತದೆ ಎಂದರೆ ಸಾಕ್ಷಿಯು ಸುಮಾರು ಹತ್ತು ಅಡಿ ಅಂತರದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ 10 ಅಡಿ ಅಂತರದಲ್ಲಿಲ್ಲ ಆದರೆ 500 ಅಡಿ ಅಂತರದಲ್ಲಿರುತ್ತದೆ ಎಂದರೆ ಸರಿಯಲ್ಲ. ಮಸೀದಿ ಸ್ವತ್ತಿಗೆ ಸಂಬಂಧಿಸಿದಂತೆ ಡಿಮ್ಯಾಂಡ್ ರಿಜಿಸ್ಟರ್ ಮತುತ ಅಸೆಸ್‌ಮೆಂಟ್ ರಿಜಿಸ್ಟರ್ ನೋಡಿರುತ್ತೇನೆ. ಆದರೆ ಏನು ಸಂಃ ಕೊಟ್ಟಿರುತ್ತಾರೆ ಎಂದು ನೆನಪಿಲ್ಲ. ಆ ರೀತಿ ಸಂಃ ಬಗ್ಗೆ ನೆನಪಿದ್ದರೂ ಕೂಡ ನೆನಪಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿಗೆ 4 ಜನ ಹೆಣ್ಣುಮಕ್ಕಳು ಮತ್ತು 2 ಜನ ಗಂಡುಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅವರ ತಂದೆಗೆ ಯಾವ ಯಾವ ಆಸ್ತಿಗಳು ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 5 ನೇ ಪ್ರತಿವಾದಿ ಗಂಡನಿಗೆ ಯಾವ ರೀತಿ ಆಸ್ತಿಗಳು ಇತ್ತು ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಗಂಡನ ಸಹೋದರ - ಸಹೋದರಿಯರು 5 ನೇ ಪ್ರತಿವಾದಿಗೆ ನೊಂದಣಿ ದಾಖಲೆ ಮೂಲಕ ಏನಾದರೂ ಪತ್ರ ಬರೆದುಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿ ಗಂಡನ ಸಹೋದರ - ಸಹೋದರರಿಗೆ ಯಾವೆಲ್ಲಾ ಆಸ್ತಿಗಳು ಹೋಗಿವೆ ಎಂದರೆ ನನಗೆ ಗೊತ್ತಿಲ್ಲ. ಮಸೀದಿ ಸ್ವತ್ತು 5 ನೇ ಪ್ರತಿವಾದಿಗೆ ಯಾವ ದಾಖಲೆ ಆಧಾರದ ಮೇರೆಗೆ ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. (ನ್ಯಾಯಾಲಯದ ಸಮಯ ಆಗಿದ್ದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು. )

ಮರು ವಿಚಾರಣೆ ಇಲ್ಲ.

ತೆ ನ್ಯಾ ನ ಉ ಬೆ ಮಾ

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ